ಮೂಗರಳಿಸಿ, ರಸನೇಂದ್ರಿಯಗಳಲ್ಲಿ ಜೊಲ್ಲು ಉಕ್ಕಿ, ಆಟೋದಲ್ಲಿ ಕುಳಿತಿದ್ದ ಸದಾಶಿವ ಭಟ್ಟರು ಹಿತವಾದ ನೆನವರಿಕೆಯಿಂದ ತುಟಿ ಅರಳಿಸಿದರು. ಇನ್ನೇನು ಮಗಳ ಮನೆ ಹತ್ತಿರ ಹತ್ತಿರ ಬಂದ ಲೆಕ್ಕ. ಬೆಳಗಿನ ಹೊತ್ತಾದ್ದರಿಂದ ಟ್ರಾಫಿಕ್ಕಿನ ರಗಳೆ ಕಿರಿಕಿರಿಯಾಗುವಷ್ಟಿಲ್ಲ. ಬೆಂಗಳೂರು ಅಂದರೆ ತಮ್ಮಂತಾ ಹಳ್ಳಿಜನಕ್ಕೆ ಪರದೇಶ ಅನ್ನುವ ಲೆಕ್ಕ. ಜಿಲ್ಲಾಕೇಂದ್ರಕ್ಕೆ ಬಸ್ಸು ಹಿಡಿದು ಅಲ್ಲಿಂದ ಇಡೀ ರಾತ್ರಿ ರೈಲಿನಲ್ಲಿ ಪ್ರಯಾಣ. ಇನ್ನೇನು ಬೆಳಕು ಕಣ್ಣು ಬಿಡುತ್ತದೆ ಅನ್ನುವಾಗ ಗಮ್ಯ ತಲುಪಿ, ಆಟೋ ಹಿಡಿದು, ಮತ್ತೂ ಮುಕ್ಕಾಲು ಗಂಟೆ ಆಟೋದಲ್ಲಿ ಮೈಕೈ ನುಗ್ಗಾಗಿಸಿಕೊಂಡು, ಸತ್ಯ ಹೇಳಬೇಕೆಂದರೆ ಮೊದಲ ಸಲ ಹೀಗೆ ಆಟೋದಲ್ಲಿ ಪ್ರಯಾಣ ಮಾಡುವಾಗ ಭಟ್ಟರಿಗೆ ಕರುಳು ಬಾಯಿಗೆ ಬಂದಂತಾಗಿತ್ತು. ಅದೇನು ವೇಗ, ಅದೇನು ವರಸೆ, ಎದುರಿಗಿರುವ ವಾಹನವನ್ನು ಗಾಳಿವೇಗದಲ್ಲಿ ಹಿಂದಿಕ್ಕಿ ಮುಂದೋಡುವ ಸಾಹಸ. ಪುಣ್ಯಕ್ಕೆ ಮಗಳಿಗೆ ಇಂತಾ ಅನುಭವಕ್ಕೆ ಒಡ್ಡಿಕೊಳ್ಳಬೇಕಾದ ಆವಶ್ಯಕತೆ ಇಲ್ಲ. ಅಳಿಯನಿಗೆ ಕೈ ತುಂಬಿ ಚೆಲ್ಲುವಷ್ಟು ದುಡಿಮೆ, ಓಡಾಡಲು ಕಾರು, ಕುಡಿದ ನೀರು ಅಲ್ಲಾಡದ ಹಾಗೆ ಹೆಂಡತಿಯನ್ನು ಕಾಪಾಡಿಕೊಂಡಿದ್ದಾನೆ ಅಳಿಯ. ಮಗಳಿಗೆ ಮದುವೆ ಮಾಡಿ ಆಗಲೇ ಎರಡು ವರ್ಷ. ಅವರವರು ಹೊಂದಿಕೊಂಡು ಚೆನ್ನಾಗಿದ್ದಾರೆ. ಅದಕ್ಕಿಂತಾ ಹೆಚ್ಚಿಗೆ ತಮಗೇನು ಬೇಕಾಗಿದೆ? 'ಹೀಗೆ ಬೆಂಗಳೂರಲ್ಲಿ ವಿವಾಹಯೋಗ್ಯನಾದ ಒಬ್ಬ ವರ ಇದ್ದಾನೆ. ಸೂಕ್ತ ಕಂಡರೆ ನಿಮ್ಮ ಮಗಳಿಗೆ ವಿಚಾರಿಸಿ' ಎನ್ನುವ ಪ್ರಸ್ತಾಪ ಬಂದಾಗ,

"ಬೆಂಗಳೂರಾ? ಅಷ್ಟು ದೂರ?" ಎನ್ನುತ್ತಾ ಅಡ್ಡಡ್ಡ ತಲೆ ಆಡಿಸಿದ್ದರು ಭಟ್ಟರು. ಪ್ರಸ್ತಾಪ ಮಾಡಿದ ಗಿರಾಕಿಗೆ ನಗೆ.

"ದೂರಾನಾ? ಬೆಂಗಳೂರಾ?" ಅನ್ನುತ್ತಾ ಗ್ರಾಸ್ತ ಇವರನ್ನು ವಿಚಿತ್ರದ ವ್ಯಕ್ತಿ ಅನ್ನುವಂತೆ ನೋಡಿದ್ದ. ಆಮೇಲೆ ಕೂರಿಸಿಕೊಂಡು ಬುದ್ಧಿ ಹೇಳಿದ್ದು ಸೀತೆ.

"ಯಾವ ಕಾಲದಲ್ಲಿದ್ದಿ ನೀನು? ನಮ್ಮನೆ ಬೇಲಿಸಾಲಿನ ಒಳಗೇ ಹುಡುಗ ಸಿಗ್ಬೇಕೂಂದ್ರೆ ಅಷ್ಟು ಸಸಾರಾನಾ? ಹಾಗೆ ಸಿಗ್ತಾನೆ ಅಂದ್ರೂ ನಿನ್ನ ಯೋಗ್ತಿಗೆ ಸರಿಯಾಗಿದ್ದೋನು ಬೇಡ್ವಾ? ಯೋಚನೆ ಮಾಡು..."

ಸಿಗಬಹುದಿತ್ತು, ಬೇಲಿಸಾಲಿನ ಒಳಗೇ ಹುಡುಗ ಸಿಗಬಹುದಿತ್ತು. ಸಿಕ್ಕಿಯೇಬಿಟ್ಟಿದ್ದಾನೆ ಅಂದುಕೊಳ್ಳುತ್ತಾ ವರ್ಷಾನುಗಟ್ಟಲೆಯಿಂದ ಮನಸ್ಸಲ್ಲಿ ಮಂಡಿಗೆ ಮೆದ್ದುಕೊಂಡು ಬಂದಿದ್ದು ಅವರ ದಡ್ಡತನ. ಬೇಲಿಸಾಲಿನ ಒಳಗೆ ಹುಡುಗನನ್ನು ಕಟ್ಟಿ ಹಾಕಲು ಬರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಿದ್ದರೂ ಇಷ್ಟುದ್ದ ಇದ್ದಾಗಿನಿಂದ ನೋಡುತ್ತಾ ಬಂದಿದ್ದವನ ಸುಪರ್ದಿಗೆ ಮಗಳನ್ನು ಒಪ್ಪಿಸಿಬಿಟ್ಟರೆ ಮತ್ತೆ ನಿಶ್ಚಿಂತೆ ಎಂದು ಕನಸಿದ್ದು ಕನಸೇ ಆಗಿಹೋಯ್ತು. ಸೀತೆಗೆ ಅಣ್ಣನ ಮನಸ್ಸಿನ ಸುಳುಸೂಕ್ಷ್ಮ ಗೊತ್ತಿರಲಿಲ್ಲವಾ? ಗೊತ್ತಿತ್ತು. ನಡೆದಿದ್ದರಲ್ಲಿ ಅವಳ ತಪ್ಪೇನಿಲ್ಲ ಎಂದು ಅಂತರಾತ್ಮಕ್ಕೆ ಅರಿವಿರುವಾಗ ಅವಳ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ತುಂಬುಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡ ಸೀತೆ ಸೊಂಟದಲ್ಲಿ ಮಗನನ್ನು ಚಚ್ಚಿಕೊಂಡು ಅಣ್ಣನ ಆಶ್ರಯಕ್ಕೆ ಬಂದಾಗ ಸತೀಶನಿಗೆ ಎರಡು ವರ್ಷ ಕೂಡಾ ತುಂಬಿರಲಿಲ್ಲ. ಹಾಗೆ ಅವಳನ್ನು ಇದ್ದುಳ್ಳವರ ಮನೆಗೆ ಕೊಟ್ಟೇ ಮದುವೆ ಮಾಡಿದ್ದು. ಆದರೆ ಮುಖ್ಯ ವಸ್ತು ಇಲ್ಲದ ಮೇಲೆ ಇವಳಿಗೆ ಆ ಮನೆಯಲ್ಲಿ ಯಾವ ಬೆಲೆ? ಭಾವಂದಿರ ಹೆಂಡಿರು ಮಕ್ಕಳ ಚಾಕರಿ ಮಾಡುತ್ತಾ ತಂಗಿ ಅಲ್ಲ್ಯಾಕೆ ಜೀವ ತೇಯಬೇಕು? ಒಡಹುಟ್ಟಿದವಳ ಕುರಿತು ಅಂತದೊಂದು ಸಂದರ್ಭದಲ್ಲಿ ಅಣ್ಣನಾದವನು ತೋರಿಸಬಹುದಾದ ಕಾಳಜಿ, ಪ್ರೀತಿ, ಅನುಕಂಪ ಏನೆಲ್ಲವನ್ನೂ ಓತಪ್ರೋತವಾಗಿ